ಸೆರಗ್ಹಿಡಿದು ಸುತ್ತಿದವಳು ಈಗ, ''ಅಪ್ಪಾ ನನಗೆ ಅಜ್ಜಿ ಬಾಜೂ ಖೋಲಿ ಬ್ಯಾಡಪ್ಪಾ ಏನೋ ಗುಂ ಅಂತ ವಾಸನಿ ಹೊಡೀತದ'' ಅಂತಾಳಲ್ಲ, ಕೇಶವನ ಕಣ್ಣಲ್ಲಿ ಬಳಬಳ ನೀರುಕ್ಕಿತು.

ಕೇಶವ ಹೀಗೆ ನೋಯುವಾಗೆಲ್ಲ ಬಗಲಲ್ಲಿ ಚೀಲ ಹಿಡಿದು ಬಿಳೀ ಧೋತರ ಉಟ್ಟು ಮನೆಗೆ ಬರುತ್ತಿದ್ದ ಪುಟ್ಟ ಮಾದುಕರಿ ಬ್ರಹ್ಮಚಾರಿಗಳಿಬ್ಬರ ನೆನಪು ಬಂದೇ ಬರುತ್ತದೆ. ಮಾದುಕರಿಯೆಂದರೆ ವೇದಾಭ್ಯಾಸವನ್ನೂ ಮಾಡುತ್ತ ಜೊತೆಗೆ ಇತರ ಶಿಕ್ಷಣವನ್ನೂ ಕಷ್ಟಪಟ್ಟು ಕಲಿಯುವ ಹುಡುಗರಿಗೆ ಒಂದೊತ್ತಿನ ಬಿಸಿ ಊಟ ನೀಡುವ ಪದ್ಧತಿ; ಇಪ್ಪತ್ತು ಮೂವತ್ತು ವರ್ಷಗಳ ಹಿಂದೆ ಉತ್ತರ ಕರ್ನಾಟಕ ಮತ್ತು ಮಹಾರಾಷ್ಟ್ರ ಗಡಿಪ್ರದೇಶಗಳಲ್ಲಿ ವಿಶೇಷವಾಗಿ ಪ್ರಚಲಿತವಿದ್ದ ರೀತಿ. ಸಾಮಾನ್ಯವಾಗಿ ಅವ್ವ ಲವಲವಿಕೆಯಿಂದಲೇ ಆ ಕೆಲಸ ಮಾಡುವಾಕೆ ಆ ದಿನ ರಾಶಿ ಭಕ್ಕರಿ ಬಡದು ಬಡದು ಬೇಸತ್ತಿದ್ದಳೇನೋ. ಹುಡುಗರ ಜೋಳಿಗೆಗೆ ಭಕ್ಕರಿ ಹಾಕಿ ಬರುವಾಗ, "ಬಂಧುಗಳಲ್ಲ ಬಳಗವಲ್ಲ, ಯಾರಾರೋ ಸಂಬಂಧಿಲ್ಲದವರಿಗೆ ಮಾಡೋದರೊಳಗ ಜೀವ ಸೋತಿತು ನಂದು" ಅಂತೇನೋ ಗೊಣಗಿದಳೆಂದು ಕಾಣುತ್ತದೆ. ಅಲ್ಲೇ ಕಟ್ಟೆಯ ಮೇಲೆ ಬತ್ತಿ ಹೊಸೆಯುತ್ತ ಕೂತಿದ್ದ ಅವರತ್ತೆ ಅಂದರೆ ಕೇಶವನ ಅಜ್ಜಿ ಕೃಷ್ಣಕ್ಕ ತಟ್ಟನೆ ಇನ್ನೂ ಹೊರಟಿದ್ದ ವಿದ್ಯಾರ್ಥಿಗಳನ್ನು ಕರೆದು, "ನಾಳಿಂದ ದಯವಿಟ್ಟು ನಮ್ಮ ಮನಿಗೆ ಅನ್ನಕ್ಕ ಬರಬೇಡಿರಪ್ಪಾ. ಬೇರೆ ಮನಿ ನೋಡಿಕೋಳ್ರಿ" ಎಂದು ಹೇಳಿ ಕಳಿಸಿಬಿಟ್ಟಳಂತೆ. ಕೂಡಲೇ ಅವ್ವನಿಗೆ ಬಹಳ ಕೆಟ್ಟೆನಿಸಿ, ''ಅತ್ಯಾ ಹಂಗ್ಯಾಕಂದ್ರಿ, ಏನೋ ತ್ರಾಸಾಗಿತ್ತು ಅಂತ ಒಂದು ಮಾತು ಬಾಯಾಗಿಂದ ಬರಬಾರದ? ಅದಕ್ಕಾಕ ಇಷ್ಟು ನಿಷ್ಠೂರ?''

''ಇಲ್ಲ ರುಕ್ಕು, ಒಮ್ಮೆ ಮನಸ್ಸಿನಾಗ 'ನಾ ಯಾಕ ಮಾಡಲಿ ಇವರಿಗೆ?' ಅಂತ ಬಂತಂದ್ರ ಮುಗೀತು ನೋಡು ಆಮೇಲೆ ಕಡ್ಡಿ ಎತ್ತಿ ಇಟ್ಟರ ಸುದ್ದಾ ತ್ರಾಸು ಅನ್ನಿಸಲಿಕ್ಕೆ ಶುರುವಾಗ್ತದ. ಸಂತೋಷದಿಂದ ಅನ್ನ ಇಕ್ಕಬೇಕು; ಇಲ್ಲಾಂದರೆ ಬಿಟ್ಟುಬಿಡಬೇಕು. ನಿತ್ಯ ಸಂತಾಪದ ಅನ್ನ ಬೇಡ ಕಲಿಯುವ ಹುಡುಗರಿಗೆ'' ಅಂತ ಖಡಾಖಂಡಿತ ಹೇಳಿಬಿಟ್ಟಳಂತೆ.

'ಅಂಬಕ್ಕತ್ತಿಯಾದರೂ ನಿಮ್ಮಿ ಸಂತಾಪದಿಂದ ನೀಡುವ ಎರಡು ತುತ್ತಿಗಾಗಿ ಏಕೆ ಗೋಣೆತ್ತಿಕೊಂಡು ಕೂಡಬೇಕು ಇಡೀದಿನ? ವೃದ್ಧಾಶ್ರಮಕ್ಕೆ ಹೋಗಿಬಿಡಲಿ; ಜೀವಮಾನವಿಡೀ ಇನ್ನೊಬ್ಬರಿಗಾಗಿಯೇ ತೇದ ಜೀವಕ್ಕೆ ಈಗರೆ ಯಾಕ ಯಾರ ಹಂಗು?' ಕೇಶವನ ಮನ ಸೆಟೆಯಿತು. ಆಮೇಲೆ ತಿಂಗಳೊಪ್ಪತ್ತಿನಾಗ ನಿಮ್ಮಿ, 'ಅಯ್ಯೋ ಎರಡು ತುತ್ತು ಅನ್ನ ಹಾಕಲಾರದಕ್ಕ ಹಿರೇ ಮನಷಾಳಿಗೆ ದುಃಖ ಕೊಟ್ಟೆ ಕ್ಷಮಿಸಿರಿ' ಅಂತ ಕಣ್ಣೀರು ಕರೀತಾಳ. ಆಮೇಲೆ ನಾ ಅಕೀ ಕಣ್ಣೊರಸಿ ಎದೆಗೊತ್ತಿಕೊಂಡು ಸಮಾಧಾನ ಮಾಡತೇನಿ. ಆಮೇಲೆ ಇಬ್ಬರೂ ನಕ್ಕೋತ ಹೋಗಿ ಅಂಬಕ್ಕತ್ತಿನ್ನ ಕಾರಿನಾಗ ಮನೀಗೆ ಕರಕೊಂಡು ಬರೋದು' ಹೀಗೊಂದು ವಿಚಾರ ಬಂದಿದ್ದೇ ಪಕಪಕ ಅಂತ ಸಶಬ್ದ ನಕ್ಕ, ಮರುಗಳಿಗೆ ಅವುಡುಗಚ್ಚಿದ; ಕಣ್ಣೊರೆಸಿಕೊಂಡು ಬಿಕ್ಕಿದ. ಕಳೆದ ವಾರ ನಿಮ್ಮಿಯ ತಮ್ಮ ಪ್ರಹ್ಲಾದ ಬಿಜಾಪುರದಿಂದ ಬಂದು ಹೋದಾಗಿನಿಂದ ಕೇಶವ ಹೀಗೆಯೇ; ಅವನ ಸ್ವಗತ ಹೀಗೆ ಬಾರಿಬಾರಿ ಕಾವೇರುತ್ತದೆ, ಪಕ್ಷ ಪ್ರತಿಪಕ್ಷ ಎರಡೂ ಹಿಡಿದು ವಾದ ಮಾಡಿ ಮತ್ತೆ ತಂತಾನೇ ತಣ್ಣಗಾಗುತ್ತದೆ.

''ಇಲ್ನೋಡ್ರಿ ಮುಂದಿನವಾರ ಮತ್ತs ಪಲ್ಲೂ ಬರ್ತೇನಂದಾನ. ಅಲ್ಲಿ ಬಿಜಾಪುರದಾಗನs ಒಂದು ಛಲೋ ವೃದ್ಧಾಶ್ರಮ ಅದ ಅಂತ. ಇಲ್ಲಿ ನೋಡ್ರಿ ನಿನ್ನೆನೇ ಅಲ್ಲಿಯ ಫೋಟೊ ವಾಟ್ಸಪ್ ಒಳಗೆ ಹಾಕ್ಯಾನ. ತಿನಸು ಉಣಸು ಡಾಕ್ಟರು... ಹಿಂಗ ಎಲ್ಲಾ ವ್ಯವಸ್ಥಾ ಛಲೋ ಅದ. ನಿನ್ನ ಗಂಡನ್ನ ಕೇಳಿ ತಿಳಿಸು ಅಂದಾನ. ಮುದಕ ಮನಷ್ಯಾರಿಗೆ ಇದಕ್ಕಿಂತ ಹೆಚ್ಚಿಗೇನು ಬೇಕು? ಎಲ್ಲರೆ ಉಂಡು ತಿಂದು ದಿನಾ ಕಳಿಯೋದಪ್ಪಾ... ನಾನಂತೂ ಮುಂದಿನವಾರ ಅಂಬಕ್ಕತ್ತೀನ ಅವನ ಕೂಡ ಕಳಸಾಕಿನs. ನೀವು ಏನ ಘಳಿಗ್ಯಾಗ ಏನರೆ ನಾಟಕ ಸುರು ಮಾಡಿಗೀಡೀರಿ ಮತ್ತ.''

ಈ ಸಲ ನಿಮ್ಮಿ ಹಿಡಿದ ಪಟ್ಟು ಬಿಡುವಂತೆ ಕಾಣದಾದಾಗ ಕೇಶವ ಏನು ಹೇಳಲೂ ತೋಚದೆ,